## ಹೊಸಗಾಲದ ಕನ್ನಡ ಹೋರಾಟಗಾರರು

ಕನ್ನಡ ಚಳವಳಿಯಲ್ಲಿ ಆರಂಭದ ದಿನಗಳಿಂದಲೂ ಸಕ್ರಿಯವಾಗಿ ತೊಡಗಿಕೊಂಡು ಮುಂದಾಳುಗಳಾಗಿದ್ದವರು ವಕೀಲರು, ಬೋಧಕರು, ಕವಿಗಳು ಹಾಗೂ ಸಾಹಿತಿಗಳು. ಇದೇ ಪರಂಪರೆ ಮುಂದುವರೆಯುತ್ತಾ ಇದೆಯಾದರೂ 21ನೇ ಶತಮಾನದಲ್ಲಿ ಆಗಿರುವ ಬದಲಾವಣೆಗಳು ಗಮನಾರ್ಹವಾಗಿವೆ. ಕನ್ನಡ ಚಳವಳಿಯಲ್ಲಿ ಇದೀಗ ಅನೇಕ ವೃತ್ತಿಪರರು ಮುಖ್ಯಪಾತ್ರ ವಹಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಕಾಲಕಾಲಕ್ಕೆ ದೇಶ, ಕಾಲ, ಪರಿಸ್ಥಿತಿಗಳಲ್ಲಿ ಆಗಿರುವ ಬದಲಾವಣೆಗಳೂ ಕನ್ನಡ ಚಳವಳಿಯ ಮೇಲೆ ಗಾಢ ಪ್ರಭಾವ ಬೀರಿವೆ.

ಸ್ವಾತಂತ್ರ್ಯಕ್ಕೂ ಮೊದಲಿನ ಸಂದರ್ಭದಲ್ಲಿ ಕನ್ನಡ ಪ್ರದೇಶಗಳನ್ನು ಒಗ್ಗೂಡಿಸುವುದು ಕನ್ನಡಪರ ಹೋರಾಟದ ಕೇಂದ್ರವಸ್ತುವಾಗಿತ್ತು. ಇದು ಸಾಧ್ಯವಾಗಲು ಸ್ವಾತಂತ್ರ್ಯ ಬಂದ ನಂತರ ಹತ್ತು ವರ್ಷಗಳಷ್ಟು ಸಮಯ ಬೇಕಾಯಿತು. ನಂತರದ ದಿನಗಳಲ್ಲಿ ಇದು ಗಡಿಭಾಗದಲ್ಲಿನ ಕನ್ನಡಿಗರ, ರಾಜಧಾನಿಯ ಕನ್ನಡಿಗರ ಅಸ್ತಿತ್ವದ ಹೋರಾಟವಾಯಿತು; ಹಿಂದೀ ಹೇರಿಕೆಯ ಎದುರಾದ ಹೋರಾಟವೂ ನಡೆಯಿತು. ಕನ್ನಡ ಚಳವಳಿಯನ್ನು ರಾಜಕೀಯ ಕ್ಷೇತ್ರದಲ್ಲೂ ಸ್ಥಾಪಿತಗೊಳಿಸುವ ಪ್ರಯತ್ನಗಳಾದವು. ದಿನಗಳೆದಂತೆ ಕನ್ನಡ ಚಳವಳಿಯನ್ನು ಕನ್ನಡಿಗರು ಮತ್ತು ಕನ್ನಡೇತರರ ನಡುವಿನ, ಕನ್ನಡಕ್ಕೆ ಸ್ಥಾನಮಾನ ಒತ್ತಾಯಿಸುವ, ಅಪಮಾನ ಕಡೆಗಣನೆಗಳನ್ನು ಎದುರಿಸುವ, ನವೆಂಬರ್ ತಿಂಗಳಲ್ಲಿ ಹಬ್ಬದಂತೆ ಕರ್ನಾಟಕ ರಾಜ್ಯೋತ್ಸವವನ್ನು ಆಚರಣೆ ಮಾಡಿ ಸಂಭ್ರಮಿಸುವುದಕ್ಕೆ ಸೀಮಿತವಾದ ಚಳವಳಿಯಾಗಿ ನೋಡುವಂತಾಯಿತು.

## ಹಳೆಬೇರು, ಹೊಸ ಚಿಗುರು

ಕನ್ನಡಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟ ಮಹನೀಯರ ಹೋರಾಟ ಹಾಗೂ ಸಿದ್ಧಾಂತಗಳ ಆಧಾರದ ಮೇಲೆ, ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ಕನ್ನಡ ಚಳವಳಿಗೊಂದು ಗಟ್ಟಿಯಾದ ಸೈದ್ಧಾಂತಿಕ ನೆಲೆಗಟ್ಟನ್ನು ರೂಪಿಸುವ, ಹೊಸದಾದ ಸ್ವರೂಪವನ್ನು ನೀಡುವ ಯತ್ನಗಳು ನಡೆಯುತ್ತಿರುವುದು, ಕನ್ನಡ ಚಳವಳಿಯಲ್ಲಿ ವೃತ್ತಿಪರ ಕನ್ನಡಿಗರು ತೊಡಗಿ, ಆಧುನಿಕ ಯುಗದ ತಂತ್ರಜ್ಞಾನಗಳನ್ನು ಚಳವಳಿಗೆ ಒಗ್ಗಿಸಿಕೊಳ್ಳಲು ಮುಂದಾದಾಗಿನಿಂದ ಎಂದರೆ ತಪ್ಪಾಗದು. ದೇಶ ವಿದೇಶಗಳನ್ನು ಸುತ್ತಿರುವ, ಬೇರೆ ಬೇರೆ ದೇಶಗಳಲ್ಲಿ ಖಂಡಗಳಲ್ಲಿ ಇರುವ ವ್ಯವಸ್ಥೆಗಳನ್ನು ಅರ್ಥ ಮಾಡಿಕೊಳ್ಳುತ್ತಿರುವ, ಬದಲಾಗುತ್ತಿರುವ ಜಗತ್ತನ್ನು ಚೆನ್ನಾಗಿ ಅರಿತಿರುವ, ಎಲ್ಲಕ್ಕಿಂತ ಮಿಗಿಲಾಗಿ ಕನ್ನಡದ ಸಾಧ್ಯತೆಗಳ ಬಗ್ಗೆ ಎಲ್ಲೆಯಿಲ್ಲದ, ಮಿತಿಗಳಿಲ್ಲದ, ಚೌಕಾಶಿಯಿಲ್ಲದ ಕನಸುಗಳನ್ನು ಕಾಣುತ್ತಿರುವ ಯುವಸಮೂಹದ ಕೈಯಲ್ಲಿ ಕನ್ನಡ ಚಳವಳಿ ಇಂದು ಅರಳುತ್ತಿದೆ.

ಜಗತ್ತಿನ ಅತ್ಯಂತ ಮುಂದುವರೆದ ನಾಡುಗಳ ಸಾಲಿನಲ್ಲಿ ಕನ್ನಡನಾಡೂ ನಿಲ್ಲಬೇಕೆಂದೂ, ಅದಕ್ಕಾಗಿ ಕನ್ನಡಿಗರು ದೇಶ–ಕಾಲಗಳಲ್ಲಿ ಒಗ್ಗಟ್ಟಿನಿಂದ ಹೆಜ್ಜೆಯಿಡಬೇಕೆಂದೂ ಈ ಸಮೂಹ ಅರಿತಿದೆ. ಇದೇ ಕಾರಣದಿಂದ ಕಳೆದೆರಡು ದಶಕಗಳಲ್ಲಿ ಕನ್ನಡ ಚಳವಳಿಗೆ ಹೊಸದಿಕ್ಕು, ಹೊಸಹುರುಪು ದೊರೆತಿರುವುದನ್ನು ನಾವು ಗಮನಿಸಬಹುದಾಗಿದೆ.

ಜಾಗತೀಕರಣದ ಪ್ರಭಾವದಿಂದಾಗಿ ಕನ್ನಡಿಗರ ಬದುಕಿನ ಮೇಲೆ ಆಗಿರುವ ಬದಲಾವಣೆಗಳನ್ನು ಚೆನ್ನಾಗಿ ಅರಿತಿರುವ ಈ ಯುವಶಕ್ತಿ ಕನ್ನಡಕ್ಕೆ ಪರಭಾಷೆ ಸಿನಿಮಾಗಳು ಬರಬಾರದು ಎನ್ನುವ ಅಸಾಧ್ಯದ ನಿಲುವನ್ನು ಬದಲಿಸಿಕೊಂಡು ‘ನಮ್ಮ ನಾಡಿಗೆ ಬರುವುದೆಲ್ಲವೂ ಕನ್ನಡದಲ್ಲೇ ಬರಲಿ’ ಎಂಬ ಕಾರ್ಯಸಾಧುವಾದ ವಿವೇಚನೆಯನ್ನು ಬೆಳೆಸಿಕೊಂಡಿರುವ ಸಮುದಾಯವಾಗಿದೆ. ಆ ಕಾರಣದಿಂದಲೇ ‘ಡಬ್ಬಿಂಗ್ ವಿರೋಧ ಎನ್ನುವುದು ಕನ್ನಡಪರ’ ಎನ್ನುವ ನಿಲುವನ್ನು ಪರಾಮರ್ಶಿಸಿ, ವಿಶ್ಲೇಷಿಸಿ ‘ಡಬ್ಬಿಂಗ್ ಎನ್ನುವುದೇ ಕನ್ನಡಪರ’ ಎಂಬ ನಿಲುವನ್ನು ಪ್ರತಿಪಾದಿಸಿ, ಅದಕ್ಕಾಗಿ ಜನಜಾಗೃತಿ ಮಾಡಿ, ಬೀದಿಹೋರಾಟ, ನ್ಯಾಯಾಲಯದ ಹೋರಾಟಗಳ ಮೂಲಕ ಡಬ್ಬಿಂಗನ್ನು ಸಾಧ್ಯವಾಗಿಸಿದೆ. ಹೀಗೆಯೇ ನಡೆದ ಮತ್ತೊಂದು ಹೋರಾಟ ‘ನಮ್ಮ ಮೆಟ್ರೋ ಹಿಂದೀ ಬೇಡ’. ಬೆಂಗಳೂರಿನ ನಗರ ಸಾರಿಗೆಯಲ್ಲೂ ಹಿಂದಿ ತರುವುದನ್ನು ವಿರೋಧಿಸಿ, ಆ ಮೂಲಕ ಹಿಂದಿಯನ್ನರಿಗೆ ಸಲ್ಲದ ಅನುಕೂಲ ಮಾಡಿಕೊಡುವ ಪ್ರಯತ್ನಕ್ಕೆ ಹಿನ್ನಡೆಯುಂಟುಮಾಡಿದ ಯಶಸ್ವಿ ಹೋರಾಟ ಅದು. ನುಡಿ ಸಮಾನತೆಗಾಗಿ, ಭಾರತದ ನೆಲದಲ್ಲಿ ಯಾವುದೇ ಒಂದು ನುಡಿಗೆ ಹೆಚ್ಚಿನ ಸ್ಥಾನಮಾನ ನೀಡುವುದನ್ನು ವಿರೋಧಿಸಿ, ಅನಿಯಂತ್ರಿತ ವಲಸೆಯನ್ನು ಉತ್ತೇಜಿಸಬಲ್ಲ ಅಪಾಯವನ್ನು ಗುರುತಿಸಿ ನಡೆಸಿದ ಚಳವಳಿ ಅದು.

**ಗ್ರಾಹಕನ ದನಿಯ ತೂಕಕ್ಕೆ ಬೆಲೆ ಹೆಚ್ಚು. ಹಾಗಾಗಿ ಪ್ರತಿಯೊಬ್ಬ ಕನ್ನಡಿಗ ಗ್ರಾಹಕನೂ ಕನ್ನಡದಲ್ಲಿ ಗ್ರಾಹಕಸೇವೆಯನ್ನು ಹಕ್ಕೊತ್ತಾಯ ಮಾಡುವ ಮೂಲಕ ಬದಲಾವಣೆಯನ್ನು ತರಲು ಸಾಧ್ಯವಿದೆ.**

**‘ಕಾಣಲಿ ಕನ್ನಡ, ಕೇಳಲಿ ಕನ್ನಡ’ ಎನ್ನುವುದು ಇಂದಿನ ಕನ್ನಡ ಚಳವಳಿಯ ಧ್ಯೇಯವಾಕ್ಯವಾಗುತ್ತಿದೆ. ಕನ್ನಡಿಗರಲ್ಲಿ ತಮ್ಮತನದೊಂದಿಗೇ ಭಾರತದ ಏಳಿಗೆ ಮಾಡಬೇಕು ಎನ್ನುವುದರ ಅರಿವು ಮೂಡಿಸುವ ಕೆಲಸವನ್ನು ಕನ್ನಡದ ಹೊಸ ತಲೆಮಾರಿನ ಹೋರಾಟಗಾರರು ಮನವರಿಕೆ ಮಾಡುತ್ತಿದ್ದಾರೆ.**

## ಭಾವುಕತೆಯಿಂದ ತಾರ್ಕಿಕತೆಯೆಡೆಗೆ...

ಭಾವನಾತ್ಮಕ ನೆಲೆಯಲ್ಲಿದ್ದ ಕನ್ನಡ ಹೋರಾಟವನ್ನು ವೈಚಾರಿಕತೆ, ವೈಜ್ಞಾನಿಕತೆ, ತರ್ಕಬದ್ಧತೆಗಳ ನೆಲೆಯೊಂದಿಗೆ ಬೆಸೆಯುವಲ್ಲಿ ಹೊಸಪೀಳಿಗೆಯ ಯುವ ಕನ್ನಡ ಚಳವಳಿಗಾರರು ತಕ್ಕಮಟ್ಟಿಗೆ ಯಶಸ್ವಿಯಾಗಿದ್ದಾರೆ. ನುಡಿಯಾಧಾರಿತ ಸಿದ್ಧಾಂತದ ಇಂದಿನ ಸ್ವರೂಪವು ದೇಶದಲ್ಲಿರುವ ಉಳಿದೆಲ್ಲಾ ರಾಜಕೀಯ, ಸಾಮಾಜಿಕ ಸಿದ್ಧಾಂತಗಳ ಸಾಲಿನಲ್ಲಿ, ಅವುಗಳಿಗೆ ಸಾಟಿಯಾಗಿ ನಿಲ್ಲುವ ದಿನಮಾನವನ್ನು ನಾವು ತಲುಪಿದ್ದೇವೆ. ಎಲ್ಲಾ ಸಿದ್ಧಾಂತಗಳನ್ನೂ ಒರೆಗೆ ಹಚ್ಚಿನೋಡುವ, ‘ಕನ್ನಡ ಮೊದಲು’ ಎನ್ನುವ ಮೂಲಭೂತ ತತ್ವದ ಪ್ರತಿಪಾದನೆಯ ಮೂಲಕ ಕನ್ನಡ ಚಳವಳಿಗೆ ಗಟ್ಟಿಯಾದ ಬೌದ್ಧಿಕ ಆಯಾಮ ದೊರೆಯುತ್ತಿರುವುದು ನಾಳೆಗಳ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಆಯಾಮವು ಕನ್ನಡ, ಕನ್ನಡತನ, ಕನ್ನಡನಾಡು, ಕನ್ನಡದ ಸಾಧ್ಯತೆಗಳು, ಕನ್ನಡದ ಕಟ್ಟುವಿಕೆಗಳ ಬಗ್ಗೆ ಹಿಂದೆಂದೂ ಇರದ ಹೊಸ ದೃಷ್ಟಿಕೋನಗಳಿಗೆ ಕಾರಣವಾಗಿದೆ.

‘ಹಿಂದೆಂದೂ ಇರದ’ ಎನ್ನುವಾಗ ಗ್ರಹಿಸಬೇಕಾದ ಸಂಗತಿಯೆಂದರೆ, ಹಿಂದೆಂದೂ ಇಂತಹ ಸಂಕೀರ್ಣ ಜಾಗತಿಕ ಸನ್ನಿವೇಶವೂ ಇರಲಿಲ್ಲ ಮತ್ತು ಇಂದು ಕಾಲಕ್ಕೆ–ಸಮಯಕ್ಕೆ ತಕ್ಕಂತೆ ಕನ್ನಡ ಚಳವಳಿಯು ತನ್ನ ಸ್ವರೂಪ ಬದಲಿಸಿಕೊಂಡು ಸಜ್ಜಾಗುತ್ತಿದೆ ಎನ್ನುವುದಾಗಿದೆ. ತಮ್ಮೆಲ್ಲಾ ನಿಲುವುಗಳನ್ನು ವೈಜ್ಞಾನಿಕವಾಗಿ ಒರೆ ಹಚ್ಚಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ವಿಶ್ಲೇಷಿಸಬಲ್ಲ, ಯಾವುದೇ ಪೂರ್ವಗ್ರಹಗಳ ಪೂರ್ವಸಿದ್ಧಾಂತಗಳ ಅಪ್ಪ ಹಾಕಿದ ಆಲದ ಮರಕ್ಕೆ ನೇತುಬೀಳದ, ಆದರೆ ಹಿರಿಯರ ನಿಲುವಿನ ಒಳಿತುಗಳನ್ನು ಕಣ್ಣಿಗೊತ್ತಿಕೊಂಡು ಸ್ವೀಕರಿಸಬೇಕೆಂಬ, ಹಿಂದಿನವರ ನಡೆಗಳನ್ನು ವಿಶ್ಲೇಷಿಸುತ್ತಲೇ ಅವರ ಮೇಲಿನ ಗೌರವ ಭಾವವನ್ನು ಬಿಡದೆ, ನಿಲುವನ್ನು ತಿದ್ದಿಕೊಂಡು ಮುಂದೆ ನಡೆಯಬೇಕೆಂಬ ಪ್ರಬುದ್ಧತೆಯನ್ನು ಇಂದಿನ ಯುವಸಮೂಹ ಅಳವಡಿಸಿಕೊಂಡು ಮುಂದಡಿ ಇಡುತ್ತಿರುವುದನ್ನು ಗಮನಿಸಬೇಕಿದೆ.

‘ಕನ್ನಡಮ್ಮ ಭಾರತಾಂಬೆಯ ಮಗಳು’ ಎನ್ನುವ ರಾಷ್ಟ್ರೀಯವಾದಿಗಳ ವಾದಕ್ಕೆ, ‘ಕನ್ನಡಾಂಬೆ, ಭಾರತಾಂಬೆ ಇಬ್ಬರೂ ಒಬ್ಬಳೇ, ಕರ್ನಾಟಕದ ಏಳಿಗೆಗಾಗಿ ದುಡಿಯುವುದು ಭಾರತಾಂಬೆಯ ಸೇವೆಯೂ ಹೌದು. ಕನ್ನಡಾಂಬೆ ಭಾರತಾಂಬೆ ಬೇರೆ ಬೇರೆ ಎಂಬುದಾಗಿ ನೋಡುವುದೇ ಸರಿಯಿಲ್ಲ’ ಎಂಬ ತಾರ್ಕಿಕ ವಿಶ್ಲೇಷಣೆ ಮಾಡುವ ಸಾಮರ್ಥ್ಯ ನಮ್ಮ ಯುವ ಕನ್ನಡಿಗರಲ್ಲಿ ಮೂಡಿರುವುದನ್ನು ಗಮನಿಸಬಹುದಾಗಿದೆ.

## ಏಳಿಗೆಯ ಹೆಗ್ಗುರಿ

ನಾಡೊಂದರ ಏಳಿಗೆಯಾಗಬೇಕಾದರೆ ಅದು